337834

**AECKA32**

Reg. No. [ | | | | | | | ]

## III Semester B.Com. Degree Examination, December/January - 2025/26

### ಕನ್ನಡ ಭಾಷಾ ಪತ್ರ
### ವಾಣಿಜ್ಯ ಸಂಪದ – 03
### (SEP Scheme, Freshers)

**Time : 3 Hours** **Maximum Marks : 80**

**I.** ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. **(5×2=10)**

1. ದುಷ್ಟಬುದ್ಧಿ ಧರ್ಮಬುದ್ಧಿ ಯಾರು? ಎಲ್ಲೆಲ್ಲಿ ವ್ಯಾಪಾರ ಮಾಡುತ್ತಿದ್ದರು?
2. ಯಾವ ಯಾವ ಗುಣವಿಲ್ಲದಿದ್ದರೆ ಸಮಾಜ ಶೋಭಿಸುವುದಿಲ್ಲ ಎಂದು ಕುಮಾರವ್ಯಾಸ ಹೇಳುತ್ತಾನೆ?
3. ಹಣದ ಹಿಂದೆ ಹೋದಾಗ ಆಗಬಹುದಾದ ಪರಿಣಾಮಗಳ ಬಗ್ಗೆ ನಾಗಲಿಂಗ ಯತಿಗಳು ಏನೆಂದು ಹೇಳುತ್ತಾರೆ?
4. ಹಳದಿ ಜ್ವರಕ್ಕೆ ನೇಮಿಚಂದ್ರರವರು ಚುಚ್ಚುಮದ್ದು ಹಾಕಿಸಿಕೊಂಡ ಅನುಭವವನ್ನು ಬರೆಯಿರಿ.
5. ಬನಾರಸಿದಾಸನ ಮೊದಲ ಸಂಪಾದನೆಯನ್ನು ಅಜ್ಜಿ ಏನು ಮಾಡಿದಳು?
6. ವೇದಿಕೆಯಲ್ಲಿ ಮಾತನಾಡುವಾಗ ಗಮನಿಸಬೇಕಾದ ಅಂಶಗಳಾವುವು?
7. ಸಾಮಾಜಿಕ ಮಾಧ್ಯಮಗಳಲ್ಲಿ ವಿಷಯ ಬರವಣಿಗೆಯ ಉದ್ದೇಶವೇನು?
8. ಬ್ಲಾಗ್ ಬರವಣಿಗೆಯಲ್ಲಿ ಇರಬೇಕಾದ ಅಂಶಗಳಾವುವು?

St. Francis College LIBRARY Koramangala, Bengaluru-34

**II.** ಅ) ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತರಿಂದ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ. **(4×5=20)**

1. ತಮ್ಮ ತಮ್ಮ ಜೀವ ಉಳಿಸಿಕೊಳ್ಳಲು ಶ್ರೀಮಂತ, ಉಪ್ಪಾರ, ಅಕ್ಕಸಾಲಿ ಹೇಳಿದ ಕಾರಣಗಳನ್ನು ಬರೆಯಿರಿ.
2. ಧರ್ಮಬುದ್ಧಿಯ ವ್ಯಕ್ತಿತ್ವವನ್ನು ಪರಿಚಯಿಸಿ.
3. ಹಣದ ಬಳಕೆಯ ಕುರಿತು ಶಿಶುನಾಳ ಶರೀಫರ ನಿಲುವೇನು?
4. ನೇಮಿಚಂದ್ರರವರು ಯಾವ ಯಾವ ಸ್ಥಳಗಳಿಗೆ ಭೇಟಿ ನೀಡಿದ್ದರು?
5. ಬನಾರಸಿಯು ಪ್ರಾರಂಭಿಸಿದ ಪಾಲುದಾರಿಕೆಯ ವ್ಯಾಪಾರಗಳಾವುವು?

**[P.T.O.**

Scanned with OKEN Scanner

ಆ) ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಹತ್ತರಿಂದ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ.(2×5=10)

1. ಪ್ರಾಕೃತಿಕ ವಿಕೋಪ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.
2. ಬ್ಲಾಗ್ ಎಂದರೇನು? ಅದರ ಗುಣಲಕ್ಷಣಗಳನ್ನು ಪರಿಚಯಿಸಿ.
3. ಸಮೂಹ ಚರ್ಚೆಯಲ್ಲಿ ಅನುಸರಿಸಬೇಕಾದ ಅಂಶಗಳನ್ನು ಚರ್ಚಿಸಿ.

III. ಅ) ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಇಪ್ಪತ್ತರಿಂದ ಇಪ್ಪತ್ತೈದು ವಾಕ್ಯಗಳಲ್ಲಿ ಉತ್ತರಿಸಿ. (2×10=20)

1. ರಾಜನ ಮೂರ್ಖತನ "ಕಾಸಿಗೊಂದು ಸೇರು" ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.
2. ದುಷ್ಟರ ಸಂಗದಿಂದಾಗುವ ತೊಂದರೆ "ದುಷ್ಟಬುದ್ಧಿ ಧರ್ಮಬುದ್ಧಿ" ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.
3. ಪ್ರಕೃತಿಯು ಕಟ್ಟಿಕೊಟ್ಟಿರುವ ಜೀವಕೇಂದ್ರಿತ ವ್ಯವಸ್ಥೆಯಲ್ಲಿ ವ್ಯಾಪಾರಕ್ಕೆ ಅರ್ಥವಿದೆಯೇ – ಮಾರುವುದು ಮತ್ತು ಕೊಳ್ಳುವುದು ಕವಿತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಇಪ್ಪತ್ತರಿಂದ ಇಪ್ಪತ್ತೈದು ವಾಕ್ಯಗಳಲ್ಲಿ ಉತ್ತರಿಸಿ. (2×10=20)

1. ಉತ್ತಮ ಭಾಷಣದ ಲಕ್ಷಣಗಳಾವುವು ಹಾಗೂ ಗಮನಿಸಬೇಕಾದ ಅಂಶಗಳಾವುವು?
2. ಎಫ್.ಎಂ. ರೇಡಿಯೋದಲ್ಲಿ ಮಾತನಾಡುವಾಗ ಅನುಸರಿಸಬೇಕಾದ ಅಂಶಗಳೇನು? ಉದಾಹರಣೆಯೊಂದಿಗೆ ವಿವರಿಸಿ.
3. ಇ–ಮೇಲ್ ಸಿದ್ಧಪಡಿಸಲು ಅನುಸರಿಸಬೇಕಾದ ಕ್ರಮಗಳೇನು? ಉದ್ಯೋಗವನ್ನು ಕೋರಿ Infosys ಕಂಪನಿಗೊಂದು ಇ–ಮೇಲ್ ಸಿದ್ಧಪಡಿಸಿ.

Scanned with OKEN Scanner